ಹೃದಯಕ್ಕೆ ಹಚ್ಚಿಕೊಂಡು ಬೆಳೆಸಿದವಳೇನಲ್ಲ. ಅಜ್ಜಿ ತನ್ನನ್ನು 'ಪ್ರಾರಬ್ಧ' ಎಂದೇ ಕರೆಯುತ್ತಿದ್ದುದು ನಳಿನಿಯ ಮನಸ್ಸಿನಲ್ಲಿ ಮಾಸದ ಗಾಯವಾಗಿ ಉಳಿದುಕೊಂಡಿದೆ. ಅದ್ಯಾಕೆ ನಳಿನಿ ಸದಾಕಾಲಕ್ಕೂ ಹೆತ್ತವರಿಗೆ ಎರವಾದಳು, ಸೋದರಮಾವನ ಹಂಗಿನಲ್ಲಿ ಬೆಳೆದಳು ಅನ್ನುವುದಕ್ಕೆ ನಿರ್ದಿಷ್ಟ ಕಾರಣ ಅವಳಿಗೆ ಗೊತ್ತಿಲ್ಲ. ನಳಿನಿಗೂ, ಅವಳ ತಂಗಿಗೂ ಒಂದೇ ವರ್ಷದ ಅಂತರ. ಮರುಚಲು ಹೆರಿಗೆಗೆ ತೌರೂರಿಗೆ ಬಂದ ನಳಿನಿಯ ಅಮ್ಮ ಎಳೆಮಗುವಿನೊಂದಿಗೆ ಇವಳನ್ನೂ ಸಂಭಾಳಿಸಲಾಗದ ಪರಿಸ್ಥಿತಿಯಲ್ಲಿ ನಳಿನಿಯನ್ನು ತನ್ನಮ್ಮನ ವಶಕ್ಕೆ ಒಪ್ಪಿಸಿ ಬಾಣಂತನ ಮುಗಿಸಿಕೊಂಡು ಹೊರಟು ಹೋದಳು. 'ಇದೇನೋ ತತ್ಕಾಲದ ವ್ಯವಸ್ಥೆ' ಅಂದುಕೊಂಡಿದ್ದರೆ ಹಾಗಾಗಲಿಲ್ಲ. ನಳಿನಿಗೆ ಸೋದರಮಾವನ ಮನೆ ಅನ್ನುವುದು ಕಾಯಂ ಆಯ್ತು. ಸುಕಾಸುಮ್ಮನೆ ಗಂಟು ಬಿದ್ದ ಈ ಪೀಡೆಯನ್ನು ಕಂಡರೆ ಅತ್ತೆಗೆ ಮೈ ಉರಿಯುತ್ತಿತ್ತು. ಕೂತಲ್ಲಿ, ನಿಂತಲ್ಲಿ ಅವಳು ನಳಿನಿಯನ್ನು ಹಂಗಿಸುವ ಮಾತಾಡುತ್ತಿದ್ದಳು. ಈ ಮಾತು ಕಿವಿಯಿಂದ ಕೇಳಲಾಗದೆ ಅಜ್ಜಿ ನಳಿನಿಯನ್ನು ಅವಳ ಅಪ್ಪನ ಮನೆಗೆ ಸೇರಿಸಿಬಿಡುವ ನಿರ್ಧಾರ ಕೈಗೊಂಡಿದ್ದು ಅದೆಷ್ಟು ಸಲವೋ. ಅಜ್ಜಿ ಬೈಯಲಿ, ಭಂಗಿಸಲಿ, ಅಜ್ಜಿಯನ್ನು ಹಚ್ಚಿಕೊಂಡಿದ್ದ ಮಗು ಅಪ್ಪನ ಮನೆಗೆ ಹೋದರೆ ಕಣ್ಣು ಕಟ್ಟಿ ಕಾಡಲ್ಲಿ ಬಿಟ್ಟಂತೆ ಕಂಗಾಲಾಗುತ್ತಿತ್ತು. ಅಜ್ಜಿ ಅಲ್ಲಿದ್ದಷ್ಟು ದಿನ ಅವಳ ಸೆರಗು ಹಿಡಿದು ಹಿಂದೆ ಹಿಂದೆ ಸುತ್ತುತ್ತಿತ್ತು. ಈ ಹೊತ್ತಿಗೆ ನಳಿನಿಯ ಅಮ್ಮನಿಗೆ ಮತ್ತೆ ಮೂರು ಮಕ್ಕಳು ಹುಟ್ಟಿ, ಚೊಚ್ಚಲ ಮಗಳ ಕುರಿತು ಅವಳಲ್ಲಿ ಉಕ್ಕಿ ಸುರಿಯುವ ಅಕ್ಕರೆಯೇನಿರಲಿಲ್ಲ. ನಳಿನಿಯ ಕಣ್ಣ ಮುಂದೆ ಅವಳನ್ನು ಬಿಟ್ಟು ಹೋಗಲು ಸಾಧ್ಯವಾಗದ ಅಜ್ಜಿ ಅವಳ ಕಣ್ಣು ತಪ್ಪಿಸಿ ಊರಿಗೆ ಹೊರಟು ಹೋಗುತ್ತಿದ್ದಳು. ಅಜ್ಜಿಯ ಮುಖ ಕಾಣದೆ ಹುಡುಗಿ ಕಣ್ಣೀರಿಟ್ಟರೆ ಅಮ್ಮನ ಕೈಯಿಂದ ಬೀಳುತ್ತಿತ್ತು ಕಡುಬು. ಅವಳನ್ನು ಪ್ರೀತಿಯಿಂದ ಓಲೈಸಿ ಒಲಿಸಿಕೊಳ್ಳುವ ಪ್ರಯತ್ನ ಯಾವತ್ತೂ ಮಾಡುತ್ತಿರಲಿಲ್ಲ ಅಮ್ಮ. ನಳಿನಿ ಅಜ್ಜಿಗೆ ಎಷ್ಟು ಹೊಂದಿಕೊಂಡುಬಿಟ್ಟಿದ್ದಳು ಅಂದರೆ ಅಜ್ಜಿ ಕಣ್ಣಿಗೆ ಕಾಣದಿದ್ದರೆ ಅವಳಿಗೆ ಹುಷಾರು ತಪ್ಪಿ ಜ್ವರ ಬಂದುಬಿಡುತ್ತಿತ್ತು. ಕಾದು ಕೆಂಡವಾದ ಮೈಯಿನ ಮಗಳನ್ನು ಅಪ್ಪ ಬಸ್ಸು ಹತ್ತಿಸಿಕೊಂಡು ಅಜ್ಜಿ ಇದ್ದಲ್ಲಿಗೆ ಕರೆದುಕೊಂಡು ಬರುತ್ತಿದ್ದರು, ಸಾಗಹಾಕಲು ಒಂದು ನೆಪ ಸಿಕ್ಕಿದಂತೆ.

"ಪ್ರಾರಬ್ಧ, ಮತ್ತೆ ಬಂದ್ಯಾ? ಅಲ್ಲೇನು ನಿನ್ನ ಕೊಂದು ತಿಂತಿದ್ರಾ?" ಎನ್ನುತ್ತಾ ಮೊಮ್ಮಗಳನ್ನು ಒಲ್ಲದ ಮನದಿಂದ ಸ್ವಾಗತಿಸುತ್ತಿತ್ತು ಮುದುಕಿ. ಒಪ್ಪೊತ್ತಿನ ಊಟಕ್ಕೂ ನಿಲ್ಲದೆ 'ಬಂದ ಕೆಲಸ ಆಯ್ತು' ಅನ್ನುವಂತೆ ಅಪ್ಪ ಮನೆಯ ಮೆಟ್ಟಿಲಿಳಿಯುತ್ತಿದ್ದಂತೆ ಅತ್ತೆ ಕೆರಳಿ ಕೆಂಡವಾಗುತ್ತಿದ್ದಳು.

"ಕಂಡೋರ ಮಕ್ಕಳಿಗೆ ಕೂಳು ಬೇಯಿಸಿ ಹಾಕೋಕೆ ಇದೇನು ಧರ್ಮಛತ್ರ ಅಂದ್ಕೊಂಡಿದಾರಾ? ನಮಗೂ ಮಕ್ಕಳುಮರಿ ಇಲ್ವಾ? ಅವರ ಭವಿಷ್ಯ ನೋಡೋದು ಬೇಡ್ವಾ? ನೀವೇ ಒಂದು ಹೆಜ್ಜೆ ಹೋಗಿ ಈ ಪ್ರಾರಬ್ಧಾನ ಅಲ್ಲಿ ಬಿಟ್ಟು ಬನ್ನಿ..."

ಪ್ರಾರಬ್ಧ, ಪ್ರಾರಬ್ಧ, ಅಜ್ಜಿ ಉಪಯೋಗಿಸಿ ಉಪಯೋಗಿಸಿ ಅಭ್ಯಾಸ ಮಾಡಿಸಿದ್ದ ಪದ ಎಲ್ಲರ ಬಾಯಲ್ಲಿ ಹಾಗೇ ಚಲಾವಣೆಯಾಗುತ್ತಿತ್ತು. ಸೋದರಮಾವ ಹೆಂಡತಿಯ ಆಜ್ಞೆ ಪಾಲಿಸಲು ತಯಾರು. ಆದರೆ ನಳಿನಿ ಅವನ ಜೊತೆ ಹೋಗಲು ಒಲ್ಲದೆ ಉಡದಂತೆ ಅಜ್ಜಿಯ ಕಾಲು ಕಟ್ಟಿಕೊಂಡು ಬಿಡುತ್ತಿದ್ದಳು. ಹೊಡೆದರೂ ಇಲ್ಲ, ಬಡಿದರೂ ಇಲ್ಲ. ಅಜ್ಜಿಯ ಹೊಡೆತಕ್ಕೆ ಹುಡುಗಿ ಅಭ್ಯಸ್ಥಳಾಗಿದ್ದಷ್ಟು ಅಮ್ಮನ ಹೊಡೆತಕ್ಕೆ ಒಗ್ಗಿಕೊಂಡಿರಲಿಲ್ಲ. ತಂಗಿಯ ಮಗಳಿಗೆ ಒಂದು ತುತ್ತು ಅನ್ನ ಹಾಕದಷ್ಟು ಸೋದರಮಾವನ ಮನೆಯಲ್ಲಿ ತತ್ವಾರ ಇರಲಿಲ್ಲ. ಅವಳ ತೌರುಮನೆಯವರಂತೆ ಇಲ್ಲಿಯೂ ಜಮೀನು, ಮನೆ ಇರುವಂತಾ ಜನ. ಮನೆಯಂಗಳದಲ್ಲಿ ಕಟ್ಟಿದ ನಾಯಿ ತಿನ್ನುತ್ತಿದ್ದುದರ ಕಾಲುಭಾಗದಷ್ಟೂ ಉಣ್ಣುತ್ತಿದ್ದವಳಲ್ಲ ನಳಿನಿ. ಆದರೂ ಅವಳ ಮೇಲೆ ಮನೆಯವರಿಗೆ ಹಗೆತನ.

"ನಿನ್ನಿಂದ್ಲೇ ಎಲ್ಲಾ ಆಗಿದ್ದು. ಅವಳನ್ನ ಇಲ್ಲಿಟ್ಕೊಂಡು ಕಲಿಸಿದ್ದೇ ನೀನು..." ಅಜ್ಜಿಯ ಮೇಲೆ ಗೂಬೆ